ಶ್ರೀ ಸಿದ್ದಯ್ಯ ಕಾಶೀಮಠ.—11 ಸಂಸ್ಥೆಗಳಿಗೆ ಮನ್ನಣೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಲಲಿತಕಲಾ ಅಕಾಡಮಿ, ಡೆಲ್ಲಿ ಮತ್ತು ರಾಜ್ಯ ಅಕಾಡೆಮಿಯಿಂದ ಸಹಾಯವನ್ನು ಕೊಡ ತಕ್ಕ ಸಂಸ್ಥೆಗಳಾವುವು ?

ಶ್ರೀ ಕೆ. ಮಲ್ಲಪ್ಪ.—ಕೇಂದ್ರದಿಂದ ಯಾವ ಸಂಸ್ಥೆಗಳಿಗೆ ಕೊಡುತ್ತಾರೆ. ಎನ್ನುವುದು ಗೊತ್ತಿಲ್ಲ. ವಿದ್ಯಾ ಇಲಾಖೆಯಿಂದ ಮನ್ನಣೆ ಕೊಟ್ಟಿರುವ ಸಂಸ್ಥೆಗಳ ಪಟ್ಟಿಯನ್ನು ಇದರಲ್ಲಿ ಕೊಟ್ಟಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಆರ್ಟ್ಸ್ ಸಂಸ್ಥೆಗಳಿಗೆ ಯಾವ ಯಾವ ಸವಲತ್ತುಗಳನ್ನು ಸರ ಕಾರದವರು ಒದಗಿಸುತ್ತ ಬಂದಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಅದು ವಿದ್ಯಾ ಇಲಾಖೆಗೆ ಸಂಬಂಧಪಟ್ಟದ್ದು ಎಂದು ಹೇಳಿದೆ. ಅದಕ್ಕೆ ಸಂಬಂಧಪಟ್ಟ ಕೋಡ್ ಇದೆ. ಅದರ ಪ್ರಕಾರವಾಗಿ ಕೊಡುತ್ತಿದ್ದಾರೆ. ಬೊಂಬಾಯಿ ಗ್ರಾಂಟ್ ಇನ್ ಎಡ್‌ಕೋಡ್ ಏನಿದೆ ಮೈಸೂರಿನಲ್ಲಿ ಕೂಡ ಅದನ್ನೇ ಅನುಸರಿಸಿ ಅದರ ಪ್ರಕಾರವಾಗಿ ಏನು ಸಹಾಯ ಕೊಡಬೇಕೋ ಅದನ್ನೆಲ್ಲ ಕೊಡುತ್ತಿದ್ದಾರೆ.

---

## Pulses Breeding Station at Gulbarga

*Q.—362. **Sri S. RUDRAPPA** (Kalgi).—

Will the Goverment be pleased to state.—

(*a*) whether it is a fact that they have sanctioned pulses breeding station at Gulbarga ;

(*b*) whether it is a fact that Government have also sanctioned package programme for Jawar in certain taluks of Gulbarga District ?

*A.—**Sri H. C. BORAIAH** (Parliamentary Secretary to Minister for Agriculture).—

(*a*) Yes.

(*b*) Yes.

**Sri S. RUDRAPPA.**—May I know the names of the Taluks for which the package programmes for jowar have been sanctioned in Gulbarga District ?

**Sri H. C. BORAIAH.**—They are. Chitapura, Yadgir and Sedam.

**Sri S. RUDRAPPA.**—To what extent technical and financial aid is given to each farmer ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನು ಈ ವರ್ಷದಲ್ಲಿ ಕಾರ್ಯಗತ ಮಾಡಬೇಕೆಂದು ಹೇಳಿ ದ್ದೇವೆ. ಆ ಸಂದರ್ಭದಲ್ಲಿ ಸರ್ವಿಸ್ ಸೊಸೈಟಿಯ ಮೂಲಕ ಪ್ರತಿಯೊಬ್ಬ ರೈತನಿಗೆ 100 ರೂಪಾಯಿ ಗಳವರೆಗೆ ಸಾಲವನ್ನು ಒದಗಿಸುವುದಕ್ಕೆ ವ್ಯವಸ್ಥೆಮಾಡುತ್ತೇವೆ.

**Sri S. RUDRAPPA.**—May I know whether officers have been posted to implement the scheme ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ, ಅದೇ ಕೊಂದರೆ ಇರುವುದು. ಈಗ ಸ್ಥಿತಿ ಉತ್ತಮ ವಾಗಿದೆ. ಬಹುಶಃ ಈ ವರ್ಷದಲ್ಲಿ ಕಾರ್ಯಗತ ಮಾಡುತ್ತೇವೆ.

ಶ್ರೀಮತಿ ಬನವರಾಜೇಶ್ವರಿ.—ಗುಲ್ಬರ್ಗಾದಲ್ಲಿ ಉತ್ತಮ ಜಾತಿಯ ದ್ವಿದಳಧಾನ್ಯಗಳ ಉತ್ಪಾದನಾ ಕೇಂದ್ರವನ್ನು ಯಾವಾಗ ಮಂಜೂರು ಮಾಡಿದಿರಿ ? ಅದರಿಂದ ಇದುವರೆಗೆ ಏನೇನು ರಿಸರ್ಚ್‌ಮಾಡಿ ರೈತರಿಗೆ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿ.ಬೋರಯ್ಯ.—ಉತ್ಪಾದನಾ ಕೇಂದ್ರವನ್ನು ಅಲ್ಲಿಗೆ ಮಂಜೂರು ಮಾಡಿದ್ದೇವೆ. ಆದರೆ ಇನ್ನೂ ಅದು ಕಾರ್ಯಗತಮಾಡುವುದಕ್ಕಾಗಿಲ್ಲ. ಈ ವರ್ಷ ಮಾಡುತ್ತೇವೆ.

S. S. RUDRAPPA.—When was the package programme for jowar sanctioned ?

ಶ್ರೀ ಎಚ್. ಸಿ. ಬೋರಯ್ಯ.— ಬಹುಶಃ ಹೋದವರ್ಷ ಅದು ಆಗಿದೆ.

Sri S. RUDRAPPA.—What are the reasons for not posting an officer to implement the scheme ?

ಶ್ರೀ ಎಚ್. ಸಿ. ಬೋರಯ್ಯ.—ಈಗ ಹೈಕೋರ್ಟಿನಲ್ಲಿ ಅನೇಕ ರಿಟ್‌ಗಳು ಬಿದ್ದಿದ್ದವು ಇನ್ನೂ ಇವೆ. ಅದಲ್ಲದೆ ಇಂಜರ್‌ಸ್ಟ್ರೇಟ್ ಸೀನಿಯಾರಿಟಿ ಲಿಸ್ಟ್ ಫೈನಲೈಜ್ ಆಗುವ ಸ್ಥಿತಿಯಲ್ಲಿತ್ತು. ಅಂತಹ ಕೆಲವು ತೊಂದರೆಗಳಿಂದ ಅದನ್ನು ಇನ್ನೂ ಕಾರ್ಯಗತ ಮಾಡಲಿಕ್ಕಾಗಲಿಲ್ಲ. ಈ ಸಾರಿ ಪರಿಸ್ಥಿತಿ ಉತ್ತಮವಾಗಿದೆ ಅದನ್ನು ಕಾರ್ಯಗತಮಾಡುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.— ಈ ಯೋಜನೆ ಮಂಜೂರಾದಮೇಲೆ ರೈತರಿಗೆ ಸಲಹೆಗಳನ್ನು ಕೊಡುತ್ತೀರಿ. ಮುಖ್ಯವಾಗಿ ಸಿಬ್ಬಂದಿಯೇ ಇಲ್ಲದಿದ್ದರೆ ಈ ಪ್ಲಾನ್ನು ಯಾವರೀತಿ ಇಂಪ್ಲಿಮೆಂಟ್ ಆಗುತ್ತದೆ ? ಹೈಕೋರ್ಟಿನಲ್ಲಿ ಈ ವಿಚಾರವಾಗಿ ರಿಟ್‌ಗಳಿದ್ದರೂ ಟೆಂಪೊರರಿಯಾಗಿಯಾದರೂ ತಕ್ಕ ಸಿಬ್ಬಂದಿಯನ್ನು ನೇಮಿಸುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಟೆಂಪೊರರಿಯಾಗಿ ಸಿಬ್ಬಂದಿಯನ್ನು ನೇಮಕಮಾಡುವುದಕ್ಕೆ ಕಷ್ಟವಾಗಿದೆ. ಸ್ಟೇಆರ್ಡರ್ ಬೇರೆ ಬಂದಿರುತ್ತದೆ. ಆದ್ದರಿಂದ ಆ ರೀತಿಮಾಡುವುದುಕ್ಕಾಗುವುದಿಲ್ಲ. ಈಗ ಸ್ಥಿತಿ ಉತ್ತಮವಾಗಿದೆ. ಆದ್ದರಿಂದ ಈ ವರ್ಷ ಅದನ್ನು ಕಾರ್ಯಗತಮಾಡುತ್ತೇವೆ.

Smt. BASAVARAJESHWARI.—May I know the location of the Pulse Farm at Gulbarga ?

ಶ್ರೀ ಎಚ್. ಸಿ. ಬೋರಯ್ಯ.—ಗುಲ್ಬರ್ಗದ ಹತ್ತಿರವೇ ಅದನ್ನು ಮಾಡಬೇಕೆಂದಿದ್ದೇವೆ.

ಅಧ್ಯಕ್ಷರು.— ಹತ್ತಿರ ಎಂದರೆ ಎಲ್ಲಿ ?

ಶ್ರೀ ಎಚ್. ಸಿ. ಬೋರಯ್ಯ.—ಗುಲ್ಬರ್ಗ ನಿಯೋಪದಲ್ಲಿ ಸೀಡ್ ಫಾರಂ ಒಂದಿದೆ. ಅಲ್ಲಿ ಅದನ್ನು ಮಾಡುತ್ತೇವೆ.

Sri S. RUDRAPPA.—May I know whether staff is going to be posted to the pulse breeding station ?

ಶ್ರೀ ಎಚ್. ಸಿ. ಬೋರಯ್ಯ.—ಹೌದು.

---

## Construction of Primary School Building at Tatanahalli Village

*Q. 405 Sri H. D. DEVEGOWDA (Holenarasipur). —

Will the Government be pleased to state.—

(*a*) the date on which the villagers of Thatanahalli village in Holenarasipur Taluk, Hassan District, have deposited their contribution to the Government for the construction of Primary School Building in their village together with the number of rooms to be constructed;

(*b*) the reasons for not constructing at least two rooms building so far;

(*c*) wheter they would take action to construct two rooms building at least now ?